ಅಮಾನತ್ತಿನಲ್ಲಿಡಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ನಾವು ಇವರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ. ಬೇರೆ ಯಾವುದೇ ಕಾರಣಕ್ಕೆ ಅಲ್ಲ ಆದಷ್ಟು ಬೇಗ ಈ ಕೇಸ್‌ಗಳನ್ನು ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಚರ್ಚೆ ಆಗತ್ಯವಿಲ್ಲವೆಂದು ಭಾವಿಸಿದ್ದೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ .....

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಸಮರ್ಪಕವಾದಂಥ ಉತ್ತರ ಕೊಟ್ಟಿದ್ದಾರಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ಈ ಇಲಾಖೆಯಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕೈಗೊಳ್ಳುವುದಕ್ಕಿಂತ ಮೇಲಾಗಿ ಸಸ್‌ಪೆಂಡ್ ಮಾಡುವುದರಲ್ಲಿ ಎತ್ತಿದ ಕೈ. ಇವರು ಇದುವರೆವಿಗೂ ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆ ಗಮನ ಕೊಟ್ಟಿಲ್ಲ. ಇದು ಕರ್ನಾಟಕ ರಾಜ್ಯದ ಎಲ್ಲಾ ಇಲಾಖೆಗಳಿಗೂ ಅತಿ ಸಣ್ಣ ಇಲಾಖೆ. ಆದರೆ ಸಸ್‌ಪೆಂಡ್ ಮಾಡಿರುವ ಇಲಾಖೆಗಳಲ್ಲಿ ಇದು ಮೊದಲನೆಯ ಇಲಾಖೆ. ಈ ಇಲಾಖೆ ಒಂದು ಇತಿಹಾಸವನ್ನೇ ನಿರ್ಮಾಣ ಮಾಡಿದೆ. ಈ ಇಲಾಖೆಯ ಮಾನ್ಯ ಮಂತ್ರಿಗಳು ಇನ್ನು ಯುವಕರು. ಅವರ ಇಲಾಖೆಯ ನೌಕರರನ್ನು ಜೈಲಿನಲ್ಲಿರ ತಕ್ಕಂಥ ಕಳ್ಳರನ್ನು ನೋಡಿಕೊಂಡಂತೆ ಆ ಇಲಾಖೆಯ ಮೇಲಾಧಿಕಾರಿಗಳು ನೋಡಿಕೊಳ್ಳುವುದು ಇನ್ನಾ ಮುಂದಾದರೂ ಬಿಡಬೇಕು. ಎಲ್ಲರೂ ಕಳ್ಳರೆಂದು ಹಳದಿ ಕಣ್ಣಿನಿಂದ ನೋಡುವುದು ಬೇಡ. ಅಲ್ಲಿನ ನೌಕರರು ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಬಿ. ಸೋಮಶೇಖರ್.—ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ. ೭೧೩ (೧೦೨೨)

(ಮಾನ್ಯ ಸದಸ್ಯರು ಗೈರು ಹಾಜರು).

ತಡೆಹಿಡಿಯಲಾದ ಪ್ರಶ್ನೆಗಳು

ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಕೊಠಡಿಗಳನ್ನು ಸರ್ಕಾರಿ ಕಛೇರಿಗಾಗಿ ಆಕ್ರಮಿಸಿ ಕೊಂಡಿರುವುದು

೭೬. ಶ್ರೀ ಮೊಹಮದ್ ಮೊಯಿನುದ್ದೀನ್ (ಚಾಮರಾಜಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಶಾಲಾ ಕಾಲೇಜುಗಳಲ್ಲಿ ಆಡಳಿತಕ್ಕಾಗಿ ಪಠ್ಯಪುಸ್ತಕ ಉತ್ತರ ಪತ್ರಿಕೆಗಳು ಇತ್ಯಾದಿ ಉಪಯೋಗಕ್ಕಾಗಿ ಉಪಯೋಗಿಸಿರುವ ಕೋಣೆಗಳೆಷ್ಟು?

ಆ) ಹಾಗಿದ್ದಲ್ಲಿ ಶಾಲೆಗಳ ಹೆಸರು ಮತ್ತು ಉಪಯೋಗಿಸುತ್ತಿರುವ ಅವಧಿ?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—

ಅ) ಒಟ್ಟು ೧೬೪ ಕೊಠಡಿಗಳ ಪೈಕಿ ೧೧೫ ಕೊಠಡಿಗಳನ್ನು ಪಠ್ಯ ಪುಸ್ತಕಗಳ ದಾಸ್ತಾನಿಗಾಗಿ ತಾತ್ಕಾಲಿಕವಾಗಿ ಉಪಯೋಗಿಸಲಾಗುತ್ತಿದ್ದು ೪೦ ಕೊಠಡಿಗಳನ್ನು ಕಛೇರಿಗಳನ್ನು ನಡೆಸಲು ಮತ್ತು ಮಧ್ಯಾಹ್ನದ ಉಪಹಾರಕ್ಕಾಗಿ ಉಪಯೋಗಿಸಲಾಗುತ್ತಿದೆ. ಮತ್ತು ಉಳಿದ ಮೂರು ಕೊಠಡಿಗಳನ್ನು ಪದವಿ ಪೂರ್ವ ಶೈಕ್ಷಣಿಕ ಉತ್ತರ ಪತ್ರಿಕೆಗಳನ್ನಿಡಲು ಉಪಯೋಗಿಸಲಾಗುತ್ತಿದೆ.

ಆ) ಅನುಬಂಧ ಅ, ಆ, ಇ ಯಲ್ಲಿ ಕೊಡಲಾಗಿದೆ.

ಅನುಬಂಧ-ಐ

ಸಾರ್ವಜನಿಕ ಶಿಕ್ಷಣ ಇಲಾಖೆಯು ಆಯುಕ್ತರ ಕಛೇರಿಗಳನ್ನು ನಡೆಸುವುದಕ್ಕೆ, ಮಧ್ಯಾಹ್ನದ ಉಪಹಾರವನ್ನು ಶೇಖರಿಸುವುದಕ್ಕಾಗಿ ಶಾಲೆಯ ಕೊಠಡಿಗಳನ್ನು ಉಪಯೋಗಿಸುತ್ತಿರುವುದು.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು		(ಅ) ರಾಜ್ಯದಲ್ಲಿರುವ ಶಾಲಾ ಕಾಲೇಜುಗಳಲ್ಲಿ ಆಡಳಿತಕ್ಕಾಗಿ ಪಠ್ಯ ಪುಸ್ತಕ, ಉತ್ತರ ಪತ್ರಿಕೆಗಳು ಇತ್ಯಾದಿ ಉಪಯೋಗಕ್ಕಾಗಿ ಉಪಯೋಗಿಸಿರುವ ಶಾಲಾಕಾಲೇಜುಗಳ ಕೋಣೆಗಳೆಷ್ಟು?	(ಆ) ಶಾಲೆಗಳ ಹೆಸರು, ಸ್ಥಳ ಮತ್ತು ಉಪಯೋಗಿಸುತ್ತಿರುವ ಅವಧಿ
೧	೨		೩	೪
೧	ಬೆಂಗಳೂರು ದಕ್ಷಿಣ ಜಿಲ್ಲೆ	೩ ಕೊಠಡಿಗಳು	(ಸಹಾಯಕ ಶಿಕ್ಷಣಾಧಿಕಾರಿಗಳ ಕಛೇರಿಗಾಗಿ)	ಸರ್ಕಾರಿ ಕಿರಿಯ ಕಾಲೇಜು (ಕೋಟೆ ಹೊಸದು)
		೩ ,,	-ಮೇಲಿನಂತೆ-	ಸರ್ಕಾರಿ ಕಿರಿಯ ಕಾಲೇಜು (೭ಳ ರಿಂದ)
		೬ ,,	ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಪ ನಿರ್ದೇಶಕರ ಕಛೇರಿಗಾಗಿ	ಸರ್ಕಾರಿ ಕಿರಿಯ ಕಾಲೇಜು ಕೋಟೆ ೧೯೭೯ರಿಂದ
		೧ ,,	(ನ್ಯೂಟ್ರಿಷನ್ ಆಹಾರಕ್ಕಾಗಿ)	ಸರ್ಕಾರಿ ಪ್ರಾಥಮಿಕ ಶಾಲೆ, ಬಸವನಗುಡಿ, ೭ಳ ರಿಂದ ಡಿಸೆಂಬರ್
		೨ ,,	(ಮಧ್ಯಾಹ್ನ ಉಪಹಾರ)	ಸರ್ಕಾರಿ ಮಾಡೆಲ್ ಪ್ರಾಥಮಿಕ ಶಾಲೆ, ಅಶೋಕನಗರ ೧೯೮೫ ರಿಂದ
		೧೫ ರೂಮುಗಳು		

(ಸೂಚನೆ.- ಕೋಟೆ ಕಿರಿಯ ಕಾಲೇಜಿನಲ್ಲಿರುವ ಕೆಲವು ಕೊಠಡಿಗಳನ್ನು ಖಾಲಿ ಮಾಡಲಾಗಿದೆ ಮತ್ತು ಉಳಿದವುಗಳನ್ನು ಕೂಡಲೇ ಖಾಲಿ ಮಾಡಲಾಗುವುದು)

LEGISLATIVE ASSEMBLY

೨	ಬೆಂಗಳೂರು ಉತ್ತರ ಜಿಲ್ಲೆ	೧ ಕೊಠಡಿ	(ಮಧ್ಯಾಹ್ನ ಉಪಹಾರ)	ಸರ್ಕಾರಿ ಪ್ರೈಮರಿ ಶಾಲೆ, ಯಶವಂತಪುರ ೮೦ ರಿಂದ
		೨ ,,	(ಎ.ಇ.ಒ. ಕಛೇರಿಗಾಗಿ)	ಪೈಸ್ ಮಿಡ್ಲ್‌ಸ್ಕೂಲ್, ಮಲ್ಲೇಶ್ವರಂ
		೧ ,,	(ಮಧ್ಯಾಹ್ನ ಉಪಹಾರ)	ಸರ್ಕಾರಿ ಪ್ರಾಥಮಿಕ ಶಾಲೆ, ಯಲಹಂಕ ೧೯೮೫ ರಿಂದ
		೧ ,,	–,,–	ಸರ್ಕಾರಿ ಮಿಡ್ಲ್‌ಸ್ಕೂಲ್ ಮುನಿರೆಡ್ಡಿಪಾಳ್ಯ ೮೫ ರಿಂದ
		೧ ,,	–,,–	ಎಸ್. ಎನ್. ರಾವ್ ಶಾಲೆ, ಕ್ಯಾಲರಿ ರಸ್ತೆ. ೮೫ ರಿಂದ
		೪ ಕೊಠಡಿಗಳು	(ಎ.ಇ.ಒ. ಕಛೇರಿಗಾಗಿ)	ಸರ್ಕಾರಿ ತೆಲುಗು ಪ್ರಾ. ಶಾಲೆ, ಕ್ವೀನ್ಸ್ ರಸ್ತೆ, ಬೆಂಗಳೂರು ಅಕ್ಟೋಬರ್ ೮೫ ರಿಂದ
		೧೦ ಕೊಠಡಿಗಳು		
೩	ಬೆಂಗಳೂರು ಗ್ರಾಮಾಂತರ ಜಿಲ್ಲೆ			
೪	ತುಮಕೂರು			
೫	ಶಿವಮೊಗ್ಗ		ಇಲ್ಲ	ಇಲ್ಲ
೬	ಚಿತ್ರದುರ್ಗ			
೭	ಕೋಲಾರ			
೮	ಮೈಸೂರು	೧ ಕೋಣೆ	(ಸಮವಸ್ತ್ರಕ್ಕಾಗಿ)	ಕೆ. ಆರ್. ಬಾಲಕಿಯರ ಶಾಲೆ, ಮೈಸೂರು ಸೆಪ್ಟೆಂಬರ್ ೮೫ ರಿಂದ
೯	ದಕ್ಷಿಣ ಕನ್ನಡ	೩ ,,	(ಎ.ಇ.ಒ. ಕಛೇರಿಗಾಗಿ)	ಸರ್ಕಾರಿ ಪ್ರಾಥಮಿಕ ಶಾಲೆ (ಟೆಂಪಲ್ ವಾರ್ಡ್) ಮಂಗಳೂರು ೧೯೮೪ ರಿಂದ
		೨ ,,	(ಎ.ಇ.ಒ. ಕಛೇರಿಗಾಗಿ)	ಸರ್ಕಾರಿ ಪ್ರಾಥಮಿಕ ಶಾಲೆ, ವಿಜಾಪುರ
		೫		

೧	೨	೩	೪
೧೦	ಹಾಸನ	೨ ಕೋಣೆ (ಎ.ಇ.ಒ. ಕಛೇರಿಗಾಗಿ)	ಸರ್ಕಾರಿ ಉರ್ದುಪ್ರಾಥಮಿಕ ಶಾಲೆ, ಹೊಳೆ
		೨ ,, (ಕೇರ್ ಉಪಹಾರಗಳು)	ನರಸೀಪುರ –ಮೇಲಿನಂತೆ–
		೧ ,, –,,–	ಸರ್ಕಾರಿ ಮೈನ್ ಮಿಡ್ಲ್‌ಸ್ಕೂಲ್, ಸಕಲೇಶಪುರ
		೫	
೧೧	ಮಂಡ್ಯ ಜಿಲ್ಲೆ	೧ ಕೋಣೆ (ಕೇರ್ ಉಪಹಾರಕ್ಕಾಗಿ)	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮದ್ದೂರು
		೨ ,, ,,	–,,– ಮಳವಳ್ಳಿ
		೧ ,, ,,	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ. ನಾಗಮಂಗಲ
		೪ ರೂಪುಂಗಳು	
೧೨	ಚಿಕ್ಕಮಗಳೂರು	೫ ರೂಪುಂಗಳು (ಎ.ಇ.ಒ. ಕಛೇರಿಗಾಗಿ)	ಸರ್ಕಾರಿ ಪ್ರಾ. ಪ್ರಾ. ಶಾಲೆ, ಮೂಡಿಗೆರೆ
೧೩	ಕೊಡಗು		
೧೪	ಗುಲ್ಬರ್ಗಾ	–ಇಲ್ಲ–	–ಇಲ್ಲ–
೧೫	ಬೀದರ್		
೧೬	ಬಳ್ಳಾರಿ		
೧೭	ರಾಯಚೂರು	೧ ರೂಪುಂ (ಇಲಾಖಾ ಪರೀಕ್ಷೆ ಉತ್ತರ ಪತ್ರಿಕೆಗಳು	(ಸರ್ಕಾರಿ ಕಿರಿಯ ಕಾಲೇಜು, ರಾಯಚೂರು)
೧೮	ಬೆಳಗಾಂ		
೧೯	ಧಾರವಾಡ		
೨೦	ಬಿಜಾಪುರ	–ಇಲ್ಲ–	–ಇಲ್ಲ–
೨೧	ಕಾರವಾರ		
	ಒಟ್ಟು	೪೬	

ಅನಂಬಂಧ—೮

ಶಾಲಾ ಕಾಲೇಜುಗಳಲ್ಲಿ, ನಿರ್ದೇಶಕರು, ಸಂಶೋಧನೆ ಮತ್ತು ತರಬೇತಿ ಇವರು ಪಠ್ಯ ಪುಸ್ತಕಗಳನ್ನು ಇಡಲು ಉಪಯೋಗಿಸುವ ಕೊಠಡಿಗಳು

ಕ್ರಮ ಸಂಖ್ಯೆ	ಜಿಲ್ಲಾವಾರು	ಎಷ್ಟು ಸರ್ಕಾರಿ ಶಾಲಾ ಕೊಠಡಿಗಳನ್ನು ವಿದ್ಯಾ ಇಲಾಖೆಯು ಪಠ್ಯ ಪುಸ್ತಕಗಳ ದಾಸ್ತಾನಿಗೆ ತೆಗೆದುಕೊಂಡಿದೆ	ಶಾಲೆಯ ಹೆಸರು ಮತ್ತು ಸ್ಥಳವನ್ನು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ತೆಗೆದುಕೊಂಡಿದೆ		
೧	೨	೩		೪	
೧.	ಕೋಲಾರ ಜಿಲ್ಲೆ	೯ ಕೊಠಡಿಗಳು	ಅ) ಬಂಗಾರಪೇಟೆ ತಾಲ್ಲೂಕು	೧ ಕೊಠಡಿ	ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ, ಕಾರಹಳ್ಳಿ, ರಸ್ತೆ ಬಂಗಾರ ಪೇಟೆ, ಮೇ ೮೫ ರಿಂದ ಇದುವರೆಗೆ
			ಆ) ಚಿಂತಾಮಣಿ ತಾಲ್ಲೂಕು	೧ ,,	ಸರ್ಕಾರಿ ಬಾಲಕರ ಪ್ರಾಥಮಿಕ ಶಾಲೆ, ಚಿಂತಾಮಣಿ ೨೭-೫-೮೯ರಿಂದ ಇದುವರೆಗೆ
			ಇ) ಗೌರಿಬಿದನೂರು ತಾಲ್ಲೂಕು	೧ ,,	ಸರ್ಕಾರಿ ಉರ್ದು ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ಗೌರಿಬಿದನೂರು, ಜೂನ್ ೮೫ ರಿಂದ ಇದುವರೆಗೆ.
			ಈ) ಕೋಲಾರ ತಾಲ್ಲೂಕು	೧ ,,	ಸರ್ಕಾರಿ ಹಳೆಯ ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ಕೋಲಾರ, ಮೇ ೮೫ ರಿಂದ ಈ ತಾರೀಖಿನ ವರೆಗೆ.
			ಉ) ಕೆ. ಜಿ. ಎಫ್.	೨ ,,	ಸರ್ಕಾರಿ ಕನ್ನಡ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ, ರಾಬರ್ಟ್‌ಸನ್ ಪೇಟೆ, ಮೇ ೮೫ ರಿಂದ ಈವರೆಗೆ

೧	೨		೩		೪
			ಊ) ಮುಳಬಾಗಿಲು ತಾಲ್ಲೂಕು	೧ ,,	ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ಮುಳಬಾಗಿಲು, ಮೇ ೮೫ ರಿಂದ ಈ ತಾರೀಖಿನವರೆಗೆ.
			ಋ) ಮಾಲೂರು ತಾಲ್ಲೂಕು	೧ ಕೊಠಡಿ	ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆ, ಮಾಲೂರು, ಮೇ ೮೫ ರಿಂದ ಈ ತಾರೀಖಿನವರೆಗೆ.
			ೠ) ಶ್ರೀನಿವಾಸಪುರ ತಾ.	೧ ,,	ಸರ್ಕಾರಿ ಮಂಖ್ಯ ಪ್ರಾಥಮಿಕ ಶಾಲೆ, ಶ್ರೀನಿವಾಸಪುರ, ಮೇ ೮೫ ರಿಂದ ಈ ತಾರೀಖಿನವರೆಗೆ.
೨. ತಂವಂಕೂರು ಜಿಲ್ಲೆ	–ಇಲ್ಲ–		–ಇಲ್ಲ–		–ಇಲ್ಲ–
೩. ಬಳ್ಳಾರಿ ಜಿಲ್ಲೆ	೭ ಕೊಠಡಿಗಳು		ಅ) ಸಿರಗುಪ್ಪ ತಾಲ್ಲೂಕು	೧ ,,	ಸ. ಮಾ. ಹಿ. ಪ್ರಾ. ಶಾಲೆ, ೬ನೇ ವಾರ್ಡ್ ಸಿರಗುಪ್ಪ, ಸೆ. ೮೫ ರಿಂದ.
			ಆ) ಹಡಗಲಿ ತಾಲ್ಲೂಕು	೨ ,,	ಟಿ.ಬಿ.ವಿ.ಸ.ಮಾ.ಹಿ.ಪ್ರಾ. ಶಾಲೆ, ಹೂವಿನ ಹಡಗಲಿ, ಬಟ್ಟೆಗಳಿಗೆ ಪುಸ್ತಕಗಳಿಗೆ, ಜೂನ್ ೮೫ ರಿಂದ.
			ಇ) ಸಂಡೂರು ತಾಲ್ಲೂಕು	೧ ,,	ಸ.ಮಾ.ಹಿ.ಪ್ರಾ. ಶಾಲೆ, ಕುಮಾರ ಸ್ವಾಮಿ, ಸಂಡೂರು, ಜೂನ್ ೧೯೮೫ ರಿಂದ.
			ಈ) ಹರಪನಹಳ್ಳಿ	೨ ,,	ಸ,ಮಾ.ಹಿ.ಪ್ರಾ. ಶಾಲೆ, ಬಾಲಿಕ ಹರಪನಹಳ್ಳಿ ಬಟ್ಟೆಗಳಿಗೆ ಪುಸ್ತಕಗಳಿಗೆ ಆಗಸ್ಟ್ ೮೫ ರಿಂದ.
			ಉ) ಕೂಡಲಗಿ	೧ ,,	ಸರ್ಕಾರಿ ಕಿರಿಯ ಮಹಾವಿದ್ಯಾಲಯಂ, ಕೂಡಲಗಿ. ಆಗಸ್ಟ್ ೮೫ ರಿಂದ,
೪. ಮಂಡ್ಯ ಜಿಲ್ಲೆ	೩ ಶಾಲೆಗಳು		೧) ಮಂಳವಳ್ಳಿ	೨) ಮಂದ್ಯೂರಂ	೩) ನಾಗಮಂಗಲ
೫. ರಾಯಚೂರು ಜಿಲ್ಲೆ	೨ ಕೊಠಡಿಗಳು		ಅ) ರಾಯಚೂರು ತಾ.	೨ ಕೊಠಡಿ	ಸರ್ಕಾರಿ ಕಿರಿಯ ಕಾಲೇಜು, ರಾಯಚೂರಿನಲ್ಲಿ, ಎರಡು ಕೊಠಡಿಗಳನ್ನು ರಾಷ್ಟ್ರೀಕೃತ ಪಠ್ಯ ಪುಸ್ತಕಗಳ ಶೇಖರಣೆಗೆ ಉಪಯೋಗಿಸಿಕೊಂಡಿದೆ. ಸದರಿ ಪಠ್ಯಪುಸ್ತಕಗಳ ಯೋಜನೆ ಬಂದಾಗಿನಿಂದ ಇಂದಿನವರೆಗೂ.

೬. ಮಂಡಿಕೇರಿ ಜಿಲ್ಲೆ	೨ ಕೊಠಡಿಗಳು	ಅ) ಸರ್ಕಾರ ಕಿರಿಯ ಕಾಲೇಜು, ಮಡಿಕೇರಿಯಲ್ಲಿ	೧೯೮೫-೮೬ ರಿಂದ ಈವರೆವಿಗೂ.
೭. ಶಿವಮೊಗ್ಗ ಜಿಲ್ಲೆ	೮ ಕೊಠಡಿಗಳು	ಅ) ೨ ಕೊಠಡಿಗಳು	ಸ. ಮಾ. ಹಿ. ಪ್ರಾ. ಗಂಡು ಮಕ್ಕಳ ಶಾಲೆ, ಹೊಸ ಬಿ. ಎಚ್. ರಸ್ತೆ, ಸಾಗರ್ ದಿನಾಂಕ ೧-೬-೮೫ ರಿಂದ.
		ಆ) ೧ ಕೊಠಡಿ	ಸ. ಹಿ ಪ್ರಾ. ಹೆಣ್ಣು ಮಕ್ಕಳ ಶಾಲೆ, ಹೊಸನಗರ ತಾಲ್ಲೂಕು, ದಿನಾಂಕ ೨೧-೫-೮೫ ರಿಂದ.
		ಇ) ೫ ಕೊಠಡಿಗಳು	ಸರ್ಕಾರಿ ಹಿ. ಪ್ರಾ. ಶಾಲೆ. ಎನ್. ಟಿ. ಭದ್ರಾವತಿ. ನವೆಂಬರ್ ೮೪ ರಿಂದ ಇಂದಿನವರೆವಿಗೂ.
೮. ಕಾರವಾರ ಉತ್ತರ ಕನ್ನಡ	೧ ಕೊಠಡಿ	ಅ) ೧ ಕೊಠಡಿ	ಸರ್ಕಾರಿ ಮಾಧ್ಯಮಿಕ ಶಾಲೆ, ಕಾರವಾರ, ಮೇ ೮೫ ರಿಂದ ಪಡೆದಿದೆ.
೯. ವಿಜಾಪುರ ಜಿಲ್ಲೆ	೧ ,,	ಅ) ೧ ,,	ಸರ್ಕಾರಿ ಬಾಲಕರ ಹಿರಿಯ ಮಹಾ ವಿದ್ಯಾಲಯ, ವಿಜಾಪುರ
೧೦. ಬೆಂಗಳೂರು ದಕ್ಷಿಣ ಜಿಲ್ಲೆ	೩ ಕೊಠಡಿಗಳು	ಅ) ೧ ,,	ಸರ್ಕಾರಿ ಮಾಧ್ಯಮಿಕ ಪಾಠಶಾಲೆ, ಚಾಮರಾಜಪೇಟೆ, ಆಗಸ್ಟ್ ೮೫ರಿಂದ ಈವರೆವಿಗೂ
		೧ ,,	ಸರ್ಕಾರಿ ಕಿರಿಯ ಹೆಣ್ಣು ಮಕ್ಕಳ ಕಾಲೇಜು, ವಿ.ವಿ.ಇನ್ಸ್ಟಿಟ್ಯೂಟ್ ಕೋಟೆ, ಬೆಂಗಳೂರು. ೧೧-೫-೮೫
		೧ ,,	ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಚಾಮರಾಜಪೇಟೆ, ಬೆಂಗಳೂರು-೧೮, ಮೇ ೮೫ ರಿಂದ ಈ ತಹಲ್‌ವರೆವಿಗೆ.
೧೧ ಹಾಸನ ಜಿಲ್ಲೆ	೯ ,,	೧) ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆ (ಪೇಟೆ) ೧೧-೬-೮೫ ರಿಂದ	ಅರಕಲಗೂಡು
		೨) —ಅದೇ—	೧೧-೬-೮೫ ರಿಂದ ಉಪಯೋಗಿಸಿಕೊಂಡಿದೆ.

೧	೨	೩	೪
		೩)	ಹಳೆಯ ಹಿರಿಯ ಪ್ರಾಥಮಿಕ ಪಾಠಶಾಲೆ, ಅರಸೀಕೆರೆ, ಜೂನ್ ೮೫ ರಿಂದ ಉಪಯೋಗಿಸಿ ಕೊಂಡಿದೆ.
		೪)	—ಅದೇ—
		೫)	ಸರ್ಕಾರಿ ಕಿರಿಯ ಪ್ರಾಥಮಿಕ ಬಾಲಕಿಯರ ಪಾಠಶಾಲೆ, ಚನ್ನರಾಯಪಟ್ಟಣ, ಆಗಸ್ಟ್ ೮೫ ರಿಂದ.
		೬)	ಸರ್ಕಾರಿ ಉತ್ತರ ಹಿರಿಯ ಪ್ರಾಥಮಿಕ ಬಾಲಕರ ಪಾಠಶಾಲೆ, ಹಾಸನ, ಆಗಸ್ಟ್ ೮೫ ರಿಂದ ೩೦-೯-೮೫ ರವರೆಗೆ
		೭)	—ಅದೇ—
		೮)	ಸರ್ಕಾರಿ ಉರ್ದು ಪಾಠಶಾಲೆ, ಹೊಳೇನರಸೀಪುರ
		೯)	ಸರ್ಕಾರಿ ಮುಖ್ಯ ಪ್ರಾಥಮಿಕ ಪಾಠಶಾಲೆ, ಸಕಲೇಶಪುರ
೧೨. ದಕ್ಷಿಣ ಕನ್ನಡ ಜಿಲ್ಲೆ	೩ ಕೊಠಡಿಗಳು	೧)	ಸರ್ಕಾರಿ ಪ್ರಾಥಮಿಕ ಪಾಠಶಾಲೆ, ಮೂಡಬಿದ್ರೆ ⎫
		೨)	—ಅದೇ— ⎬ ೩೧-೫-೮೫ ರಿಂದ ಈ
		೩)	ಸರ್ಕಾರಿ ಮಾಧ್ಯಮಿಕ ಪಾಠಶಾಲೆ, ಬೆಳ್ತಂಗಡಿ ⎭ ತಹಲ್‌ವರೆವಿಗೂ
೧೩. ಚಿತ್ರದುರ್ಗ ಜಿಲ್ಲೆ	೭೦ ,,	೧)	ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಬಾಲಕಿಯರ ಶಾಲೆ, ಚಿತ್ರದುರ್ಗ, ಜೂನ್ ೮೫ ರಿಂದ ಈವರೆವಿಗೆ (೨ ಕೊಠಡಿಗಳು).
		೨)	ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಬಾಲಕಿಯರ ಶಾಲೆ, ದಾವಣಗೆರೆ, ಚಿತ್ರದುರ್ಗ ಜೂನ್ ೮೫ ರಿಂದ ಈವರೆವಿಗೆ (೨ ಕೊಠಡಿಗಳಲ್ಲಿ).
		೩)	ಸರ್ಕಾರಿ ಕಿರಿಯ ,, ,,
		೪)	ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆ, ಹರಿಹರ ೩ ಕೊಠಡಿಗಳಲ್ಲಿ
		೫)	,, ಹೊಳಲ್‌ಕೆರೆ —,,—
		೬)	,, ಹೊಸದುರ್ಗ —,,—
		೭)	ಸರ್ಕಾರಿ ಕಿರಿಯ ,, ಹಿರಿಯೂರು —,,—
		೮)	ಸರ್ಕಾರಿ ಕಿರಿಯ ,, ಚಳ್ಳಕೆರೆ —,,—
		೯)	ಸರ್ಕಾರಿ ಕಿರಿಯ ,, ಮೊಳಕಾಲ್ಮೂರು —,,—
		೧೦)	ಸರ್ಕಾರಿ ಹಿರಿಯ ,, ಜಗಳೂರು —,,—

೧೪. ಚಿಕ್ಕಮಗಳೂರು ಜಿಲ್ಲೆ	೫ ಕೊಠಡಿಗಳು	೧)	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮೂಡಿಗೆರೆ, ೫ ಕೊಠಡಿಗಳು	೧೧–೭–೮೫ ರಿಂದ ಈವರೆವಿಗೆ.
೧೫. ಬೀದರ್ ಜಿಲ್ಲೆ	೫ ಕೋಣೆಗಳು	೧)	ಸರ್ಕಾರಿ ಕಿರಿಯ ಮಹಾವಿದ್ಯಾಲಯ ಬೀದರ್	ಜೂನ್ ೧೯೮೫ ರಿಂದ ತೆಗೆದುಕೊಳ್ಳಲಾಗಿದೆ
		೨)	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಸವನಗಲ್ಲಿ	
		೩)	ಸರ್ಕಾರಿ ಹೆಣ್ಣು ಮಕ್ಕಳ ಮಾದರಿಯ ಪ್ರಾಥಮಿಕ ಶಾಲೆ, ಬಾಲ್ಕಿಯಲ್ಲಿ ೨ ಕೋಣೆಗಳು.	
		೪)	ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ, ಬಸವಕಲ್ಯಾಣ	
೧೬. ಬೆಳಗಾಂ ಜಿಲ್ಲೆ	೧೧ ಕೋಣೆಗಳು	ಅ)	ಅಥಣಿ ತಾಲ್ಲೂಕು (೧) ಸರ್ಕಾರಿ ಕನ್ನಡ ಪ್ರಾಥಮಿಕ ಹುಡುಗರ ಶಾಲೆ, ೧–೧೧–೮೫ ರಿಂದ	
			(೨) ಉರ್ದು ,,	
		ಆ)	ಹುಕ್ಕೇರಿ ತಾಲ್ಲೂಕು (೧) ಸರ್ಕಾರಿ ಮಾಡೆಲ್ ಉರ್ದು ಹುಡುಗರ ಶಾಲೆ, ಹುಕ್ಕೇರಿ ೨೨–೬–೮೫ ರಿಂದು	
		ಇ)	ಸೌಂದತ್ತಿ ತಾಲ್ಲೂಕು (೧) ಸರ್ಕಾರಿ ಹುಡುಗರ ಪ್ರಾಥಮಿಕ ಶಾಲೆ, ಸೌಂದತ್ತಿ ೧–೬–೮೫ ರಿಂದ.	
			(೨) ಸರ್ಕಾರಿ ಮರಾಠಿ ಹುಡುಗರ ಪ್ರಾಥಮಿಕ ಶಾಲೆ, ರಾಮದುರ್ಗ ೭–೬–೮೫ ರಿಂದ ೩೦–೧೦–೮೫ರ ವರೆಗೆ	
		ಈ)	ಖಾನಾಪೂರ ತಾ. (೧) ಸರ್ಕಾರಿ ಮಾಡೆಲ್ ಹುಡುಂಗರ ಪ್ರಾಥಮಿಕ ಶಾಲೆ. ಖಾನಾಪುರ ೧೦–೬–೮೫ ರಿಂದ.	
		ಉ)	ರಾಯಬಾಗ್ ತಾ. ೧) ಸರ್ಕಾರಿ ಮಾದರಿ ಹುಡುಗರ ಪ್ರಾಥಮಿಕ ಶಾಲೆ, ೧–೬–೮೦ ರಿಂದ	
		ಊ)	ಬೆಳಗಾಂ ಪಟ್ಟಣ (೧) ಸರ್ಕಾರಿ ಉರ್ದು ಹುಡುಗರ (೨) –,,– (೩) –,,–	ಪ್ರಾಥಮಿಕ ಶಾಲೆ, ಬೆಳಗಾಂ ೯–೬–೮೫ ರಿಂದ ೮/೮೫ (೨ ಕೋಣೆಗಳನ್ನು ಖಾಲಿ ಮಾಡಲಾಗಿದೆ. ಒಂದು ಕೋಣೆಯನ್ನು ಸ್ವಾಧೀನದಲ್ಲಿಡಲಾಗಿದೆ

೧	೨	೩	೪
			(೪) ಸರ್ಕಾರಿ ಸರದಾರ್ ಕಿರಿಯ ವಿದ್ಯಾಲಯ, ಬೆಳಗಾಂ ೧೬-೮-೮೫ರ ವರೆಗೆ.
		೪ಬ) ಬೆಳಗಾಂ ತಾಲ್ಲೂಕು ೪ಭ) ಚಿಕ್ಕೋಡಿ ತಾಲ್ಲೂಕು ಎ) ಬೈಲಹೊಂಗಲ್ ತಾ. ಏ) ಗೋಕಾರ್ ತಾಲ್ಲೂಕು ಐ) ನಿಪ್ಪಾಣಿ ತಾಲ್ಲೂಕು	ಇಲ್ಲ.
೧೭. ಬೆಂಗಳೂರು ರೂರಲ್ ಜಿಲ್ಲೆ	—ಇಲ್ಲ—		—ಇಲ್ಲ—
೧೮. ಬೆಂಗಳೂರು ಉತ್ತರ ಜಿಲ್ಲೆ	೨ ಕೊಠಡಿಗಳು	೧)	ಸರ್ಕಾರಿ ಮಂಮ್ಮಿ ಮಾಧ್ಯಮಿಕ ಶಾಲೆ, ಮಲ್ಲೇಶ್ವರ, ಬೆಂಗಳೂರು, ಮೇ ೮೫ ರಿಂದ.
		೨)	ಸರ್ಕಾರಿ ಮಾಧ್ಯಮಿಕ ಶಾಲೆ, ಪ್ಯಾಲೇಸ್ ಗುಟ್ಟಹಳ್ಳಿ, ಮೇ ೮೫ ರಿಂದ.
೧೯. ಮೈಸೂರು ಜಿಲ್ಲೆ	೭ ,,	ಅ) ಮೈಸೂರು ಪಟ್ಟಣ (೧)	ಸರ್ಕಾರಿ ಕೆ. ಆರ್. ಬಾಲಕಿಯರ ಹೈಯರ್ ಪ್ರಾಥಮಿಕ ಸರ್ಕಾರಿ ಶಾಲೆ, ಮೈಸೂರು ಜೂನ್ ೧೯೮೫ ರಿಂದ.
		ಆ) ನಂಜನಗೂಡು ತಾ. (೧)	ಸರ್ಕಾರಿ ನಾಗಮ್ಮ ಬಾಲಕಿಯರ ಹೈಯರ್ ಪ್ರಾಥಮಿಕ ಶಾಲೆ, ನಂಜನಗೂಡು ೨೮-೫-೮೫ ರಿಂದ.
		ಇ) ಕೊಳ್ಳೇಗಾಲ (೧)	ಸರ್ಕಾರಿ ರಾಷ್ಟ್ರೀಯ ಹಾಡುಗರ ಹೈಯರ್ ಪ್ರಾಥಮಿಕ ಶಾಲೆ, ಕೊಳ್ಳೇಗಾಲ ೨೯-೫-೮೫ ರಿಂದ.
		ಈ) ಹುಣಸೂರು ತಾ. (೧)	ಸರ್ಕಾರಿ ಪೇಟೆ ಹುಡುಗರ ಕಿರಿಯ ಪ್ರಾಥಮಿಕ ಶಾಲೆ, ಹುಣಸೂರು ೨ ವರ್ಷಗಳಿಂದ.
		(೧)	—,,—
		ಉ) ಟಿ ನರಸೀಪುರ ತಾ. (೧)	ಸರ್ಕಾರಿ ಬಾಲಕಿಯರ ಹೈಯರ್ ಪ್ರಾಥಮಿಕ ಶಾಲೆ, ಟಿ.ನರಸೀಪುರ ಒಂದು ವರ್ಷದಿಂದ.
		ಊ) ಯಳಂದೂರು ತಾ. (೧)	ಸರ್ಕಾರಿ ಬಾಲಕರ ಹೈಯರ್ ಪ್ರಾಥಮಿಕ ಶಾಲೆ, ಯಳಂದೂರು ಒಂದು ವರ್ಷದಿಂದ.

೨೦. ಧಾರವಾಡ ಜಿಲ್ಲೆ	೯ ಕೊಠಡಿಗಳು	(೧) ಕನ್ನಡ ಬಾಲಕರ ಶಾಲೆಗಳು, ಗೋಪನಕೊಪ್ಪ		
		(೨) ಶಿರಹಟ್ಟಿ		
		(೩) ಹಾವೇರಿ		
		(೪) ಮುಂಡರಗಿ		
		(೫) ರೋಣ		
		(೬) ಸವಣೂರು		
		ಒಂದು ಕೊಠಡಿ ಮತ್ತು ಕುಂಡೊಳು ೩ ಕೊಠಡಿಗಳು		
೨೧. ಗುಲ್ಬರ್ಗಾ ಜಿಲ್ಲೆ	೮ ಕೊಠಡಿಗಳು	೧) ಸರ್ಕಾರಿ ಪ್ರೌಢಶಿಕ್ಷಣ ಪ್ರೌಢಶಾಲೆ, ಗುಲ್ಬರ್ಗಾ	(೧)	ಜೂನ್ ೮೫ ರಿಂದ
		೨) ಎಂ.ಪಿ.ಎಸ್. ಆಲಂದ್	(೧)	,,
		೩) ಸರ್ಕಾರಿ ಎಂ.ಪಿ.ಎಸ್. ಯಾದಗೀರ್ (ಹೆಣ್ಣು ಮಕ್ಕಳ)	(೧)	,,
		೪) ಸರ್ಕಾರಿ ಕಿರಿಯ ಕಾಲೇಜು, ಶಹಾಪೂರ	(೧)	೧-೫-೮೫ ರಿಂದ
		೫) -,,- ಚಿತ್ತಾಪುರ	(೧)	ಜುಲೈ ೮೫ ರಿಂದ
		೬) -,,- ಸೇಡಂ	(೧)	ಜೂನ್ ೮೫ ರಿಂದ
		೭) ಸರ್ಕಾರಿ ಹೆಣ್ಣು ಮಕ್ಕಳ ಹೈಯರ್ ಪ್ರಾಥಮಿಕ ಶಾಲೆ, ಚಿಂಚೋಳಿ	(೧)	,,

ಅನುಬಂಧ–೩

ಪದವಿ ಪೂರ್ವ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಇಡುವುದಕ್ಕಾಗಿ ಉಪಯೋಗಿಸುವ ಕೊಠಡಿಗಳು.

ದ್ವಿತೀಯ ಪಿ.ಯು.ಸಿ, ಉತ್ತರ ಪತ್ರಿಕೆಗಳನ್ನು ಇಡುವುದಕ್ಕಾಗಿ, ಸರ್ಕಾರಿ ಶಾಲೆಗಳ ಮೂರರಿ ಕೋಣೆಗಳನ್ನು ತೆಗೆದುಕೊಂಡಿದೆ.

ಆ ಶಾಲೆಗಳೆಂದರೆ, ಸರ್ಕಾರಿ ಕಿರಿಯ ಕಾಲೇಜು (ಸೆಂಟ್ರಲ್ ಜೂನಿಯರ್ ಕಾಲೇಜು) ಇದರಲ್ಲಿ ಒಂದು ಕೋಣೆ.

ಹೆಣ್ಣು ಮಕ್ಕಳ ಕಿರಿಯ ಕಾಲೇಜು, ೧೩ನೇ ಆಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–೩ ಇದರಲ್ಲಿ ಎರಡು ಕೋಣೆಗಳು.

ಈ ಮೂರು ಕೋಣೆಗಳನ್ನು ಏಪ್ರಿಲ್ ೧೯೮೪ ರಿಂದ ಉಪಯೋಗಕ್ಕೆ ತೆಗೆದುಕೊಂಡಿದೆ.

ಶ್ರೀ ಮಹಮದ್ ಪೊಯನುದ್ದೀನ್.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸುಮಾರು ೧೬ ಕೊಠಡಿಗಳೆಂದು ಹೇಳಿದ್ದಾರೆ. ಅವರು ಕೊಟ್ಟಿರತಕ್ಕಂಥ ಉತ್ತರದ ಪಟ್ಟಿಯಲ್ಲಿ ನೋಡಿದರೆ ಈ ಕೊಠಡಿಗಳನ್ನು ೧೯೭೪ನೇ ಇಸವಿಯಿಂದ ಅವರು ವಶಪಡಿಸಿಕೊಂಡಿದ್ದಾರೆ. ಈ ಕೊಠಡಿಗಳಲ್ಲಿ ಶಾಲಾ ಮಕ್ಕಳಿಗೆ ಸರಿಯಾದ ಜಾಗ ಸಿಗುತ್ತದೆಯೇ ಇದನ್ನು ಮಾನ್ಯ ಮಂತ್ರಿಗಳು ಯಾವ ರೀತಿಯಲ್ಲಿ ಜಸ್ಟಿಫೈ ಮಾಡುತ್ತಾರೆ ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮಾನ್ಯ ಸದಸ್ಯರ ಪ್ರಶ್ನೆ ಬಹಳ ಸವಂಜಸವಾಗಿದೆ. ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಇಲಾಖೆ ಎನ್ನತಕ್ಕಂತಾದ್ದು ಎಷ್ಟು ವಿಶಾಲವಾಗಿ ಬೆಳೆದಿದೆ ಎಂಬುದನ್ನು ಹೇಳತಕ್ಕಂಥ ಅಗತ್ಯ ಇಲ್ಲ. ಆದರೆ ಶಾಲಾ ಕಟ್ಟಡಗಳ ಕೊರತೆ ತುಂಬಾ ಇದೆ. ಡಿ.ಡಿ.ಪಿ.ಐ. ಮತ್ತು ಎ.ಇ.ಓ. ಕಚೇರಿಗಳಲ್ಲಿ ನಡೆಯಯಂತ್ತಿವೆ. ಎಲ್ಲೆಲ್ಲಿ ಶಾಲಾ ಕಟ್ಟಡಗಳನ್ನು ಆಫೀಸುಗಳಿಗಾಗಿ ಉಪಯೋಗಿಸಿ ಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, ೧೯೭೪ನೇ ಇಸವಿಯಿಂದ ಖಾಲಿ ಇದ್ದ ಶಾಲಾ ಕಟ್ಟಡಗಳನ್ನು ಉಪಯೋಗ ಮಾಡಿಕೊಂಡಿದ್ದೇವೆ. ಬೇರೆ ಕಡೆ ಸಿಕ್ಕದೇ ಇದ್ದಿದರಿಂದ ಇಲ್ಲಿ ಆಫೀಸು ನಡೆಯಬೇಕು, ಶಾಲೆಯೂ ನಡೆಯಬೇಕು ಎಂಬ ದೃಷ್ಟಿಯಿಂದ ಉಪಯೋಗ ಮಾಡಲಾಗಿದೆ. ಈಗ ಇದಕ್ಕಾಗಿ ಹಣದ ಅವಶ್ಯಕತೆ ಇದೆ. ಇದನ್ನು ನೋಡಿಕೊಂಡು ಆದಷ್ಟು ಜಾಗ್ರತೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮಹಮದ್ ಪೊಯಿನುದ್ದೀನ್.—ಯಾವಾಗ ಖಾಲಿ ಮಾಡುತ್ತೀರಿ ಎಂಬುದಕ್ಕೆ ತಾವು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಹೆಚ್.ಜಿ. ಗೋವಿಂದೇಗೌಡ.—ಮಾನ್ಯ ಸದಸ್ಯರು ಕೇಳಿರತಕ್ಕಂಥ ಒಂದು ಶಾಲಾ ಕಟ್ಟಡ ಈಗಾಗಲೇ ಖಾಲಿ ಆಗಿದೆ. ಅಲ್ಲಿದ್ದ ಡಿ. ಡಿ. ಪಿ. ಐ. ಆಫೀಸನ್ನು ಬೇರೆ ಕಡೆ ಷಿಫ್ಟ್ ಮಾಡಿದ್ದೇವೆ. ಶಾಲಾ ಕಟ್ಟಡಗಳ ಬಗ್ಗೆ ಹಂತಹಂತವಾಗಿ ಬದಲಾವಣೆ ಮಾಡುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಗ್ರಾಮೀಣ ಅಭಿವೃದ್ಧಿ ಇಲಾಖೆಯ ಆಯವ್ಯಯದ ಬಗ್ಗೆ

೩೨೩. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫–೮೬ನೇ ಸಾಲಿನಲ್ಲಿ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಆಯವ್ಯಯದಲ್ಲಿ ಶೇ. ೧೮ ರಷ್ಟು ಹಣವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಉಪಯೋಗಿಸಿದೆಯೆ ? (ಈ ತಹಲ್‌ವರೆಗಿನ ಮಾಹಿತಿ ನೀಡಬೇಕು).

ಆ) ಈ ರೀತಿ ಖರ್ಚು ಮಾಡಿದ ಗ್ರಾಮೀಣ ಅಭಿವೃದ್ಧಿ ಇಲಾಖೆ ವ್ಯಾಪ್ತಿಯ ಸಂಸ್ಥೆಗಳು ಯಾವ ಉದ್ದೇಶಕ್ಕಾಗಿ ಖರ್ಚು ಮಾಡಿರುತ್ತೆ ಎಂಬ ಮಾಹಿತಿ (ದಯವಿಟ್ಟು ಸಂಸ್ಥೆವಾರು ಮಾಹಿತಿ ನೀಡ ಬೇಕು).